KACM010001992016

Presented on : 07-01-2016
Registered on : 07-01-2016

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by Smt. BHANUMATHI B C)**
**SPL.C/1/2016**

Complainant(PROSECUTION):
State by- Karnataka Lokayuktha Police, Chikkamagaluru.

**VERSUS**

Accused:
Sri. Channabasappa, So. Ambaraya Makale, aged 50 years, Executive Officer, Taluk Panchayath Office, Mudigere, Chikkamagaluru District, No. Nasiravadi Village, Kasaba Hobli, Alanda Taluk, Kalaburgi District.

---------------------------------------------------------------------------

State Complainant}: Spl. Public Prosecutor,
Sri. K.S.SHANTHIPRAKASH appearing for Sri. Channabasappa,

---------------------------------------------------------------------------

**Offence punishable under : U/Sec.13(1)(E)r/w13(2)ofPCAct1988.**
**of PREVENTION OF CORRUPTION ACT,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ 1/2016

| | | |
|---|---|---|
| ಸಾಕ್ಷಿದಾರರ ಹೆಸರು | - ಹನುಮಂತಗೌಡ | ಪಿಡಬ್ಲೂ - 31 |
| ತಂದೆಯ ಹೆಸರು | - ಬಸವಂತಗೌಡ | ಸಿಡಬ್ಲೂ -71 |
| ವಯಸ್ಸು | - 49 ವರ್ಷ | |
| ಉದ್ಯೋಗ | - Regional Manager, Bajaj Allianz life insurance company, Davanagere | |
| ವಾಸ ಸ್ಥಳ | - ರಾಯಚೂರು | |

ದಿನಾಂಕಃ 24-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

**1.** ನಾನು ಕಲ್ಬುರ್ಗಿ ಶಾಖೆಯ ರಿಲಯನ್ಸ್ life insurance company ಯಲ್ಲಿ 2012 ರಿಂದ 2016 ನೇ ಇಸ್ವಿ ಡಿಸೆಂಬರ್ ತಿಂಗಳಿನವರೆಗೆ territory ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ಆ ಸಮಯದಲ್ಲಿ ದಿನಾಂಕಃ 13-11-2013 ರಂದು ಡಿ.ವೈ. ಎಸ್.ಪಿ. ಲೋಕಾಯುಕ್ತ ಚಿಕ್ಕಮಗಳೂರುರವರು ನಮ್ಮ ಕಛೇರಿಗೆ ಮನವಿಯನ್ನು ಸಲ್ಲಿಸಿ, ಈ ಪ್ರಕರಣದ ಆರೋಪಿಗೆ ಸಂಬಂಧಿಸಿದ ಪಾಲಿಸಿಗಳ ವಿವರಗಳನ್ನು ನೀಡುವಂತೆ ಕೋರಿದ್ದರು. ಅದರ ಮೇರೆಗೆ ನಾನು ನಮ್ಮ ಕಛೇರಿಯ ಕಡತಗಳನ್ನು ಪರಿಶೀಲಿಸಿ, ಈ ಪ್ರಕರಣದ ಆರೋಪಿ ನಮ್ಮ ರಿಲಯೆನ್ಸ್ life insurance company ಯಿಂದ ತನ್ನ ಹೆಸರಿಗೆ ಪಡೆದಿದ್ದ 2 ಪಾಲಿಸಿಗಳ ವಿವರಗಳನ್ನೊಳಗೊಂಡ ವರದಿಯನ್ನು ಆತ ಪಡೆದಿದ್ದ ಪಾಲಿಸಿಗೆ ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ದಿನಾಂಕಃ 06-01-2014 ರಂದು ಡಿ ವೈ ಎಸ್ ಪಿ ಲೋಕಾಯುಕ್ತ ಚಿಕ್ಕಮಗಳೂರುರವರಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ವರದಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ವರದಿಯನ್ನು ನಿ.ಪಿ. 104 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.104(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರಃ ಶ್ರೀ ಕೆಎಸ್ ಎಸ್ ಪಿ ವಕೀಲರಿಂದಃ

3. ಡಿ ವೈ ಎಸ್ ಪಿರವರು ನಿಮಗೆ ಸಲ್ಲಿಸಿದ್ದರು ಎಂದು ಹೇಳಲಾದ ಮನವಿಯನ್ನು ನೀವು ನ್ಯಾಯಾಲಯಕ್ಕೆ ಅಥವಾ ಪೊಲೀಸರಿಗೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಹಾಜರುಪಡಿಸಿಲ್ಲ ಎಂದು ಹೇಳಿರುತ್ತಾರೆ. ನೀವು ನಿ.ಪಿ.104 ರಲ್ಲಿ ನಮೂದಿಸಿರುವ ಪಾಲಿಸಿಗಳು ಪ್ರೀಮಿಯಮ್ ಹಣವನ್ನು ಭರಿಸದ ಕಾರಣ lapse ಆಗಿರುತ್ತವೆ ಎಂದರೆ ಸರಿ.

ನಿ.ಪಿ.104 ರಲ್ಲಿ ನಮೂದಿಸಿರುವ ಮೊದಲನೇ ಪಾಲಿಸಿಗೆ ಸಂಬಂಧಿಸಿದಂತೆ ರೂ.79,288.55 surrender ಹಣವನ್ನು ಆರೋಪಿಗೆ ಹಿಂದಿರುಗಿಸಲಾಗಿದೆ ಎಂದರೆ ಸರಿ.

ಮರು ವಿಚಾರಣೆಃಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-24-02-2025
(ಭಾನುಮತಿ ಬಿ.ಸಿ)
C/c ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ/-

Visit **ecourts.gov.in** for updates or download mobile app “**eCourts Services**” from Android or iOS